Online Newspaper Clipping Service
**Dated, Wednesday 22nd February – 2017**

DECCAN HERALD

**Pg.No.03**

# NEET must for Ayush admissions

BENGALURU: The Ministry of Ayush has said that in order to bring meritorious students to Ayush systems, all undergraduate seats for Ayush (Ayurveda, Yoga, Unani, Sidda and Homeopathy) would be filled through the National Eligibility Cum Entrance Test (NEET).

Thus, private exams would not be conducted to fill seats for any of the Ayush colleges. A total of 3,890 seats are being made available in over 70 Ayush colleges across the state this time. The ministry of Ayush has written to the state government to comply with these orders and ensure students for Ayush colleges are admitted under NEET only. Also, there will be no provision for management or NRI quota.

When the Ayush ministry had sought an opinion from all states in December 2016 to conduct NEET for Ayush, Karnataka had submitted a positive response to it.

**Online application software**

After much delay, the Department of Public Instruction on Saturday threw open the test version of the online application software. Parents can access the software on the Department of Public Instruction website. Last week, parents had expressed anxiety as there was a delay in the process. The department had initially said that the application would be thrown open 15 days ago.

The department had issued a notification on December 12 calling for applications on their website from January 15 to February 15, along with instructions and rules. However, no link was provided even when another notification was issued changing the date to January 20.

**DH News Service**

ಪ್ರಜಾವಾಣಿ



### ಜನವರಿಯಿಂದ ಪೂರ್ವಾನ್ವಯ: ಕಾರ್ಮಿಕ ಇಲಾಖೆ ಆದೇಶ

# ಖಾಸಗಿ ಆಸ್ಪತ್ರೆ ಸಿಬ್ಬಂದಿಗೆ ಕನಿಷ್ಠ ವೇತನ

**ಬೆಂಗಳೂರು:** ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳಲ್ಲಿ ಕಾರ್ಯ ನಿರ್ವಹಿಸುವ ವೈದ್ಯರು, ಶುಶ್ರೂಷಕರು, ತಾಂತ್ರಿಕ ಮತ್ತು ವೈದ್ಯಕೀಯ ಸಹಾಯಕರಿಗೆ ಕನಿಷ್ಠ ವೇತನ ನಿಗದಿ ಮಾಡಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ಆದೇಶ ಹೊರಡಿಸಿದೆ.

2017ರ ಜನವರಿ 6ರಿಂದ ಈ ಆದೇಶ (ಕಾಇ125 ಎಲ್‌ಡಿಡಬ್ಲ್ಯು 2105) ಜಾರಿಗೆ ಬಂದಿದೆ. ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ನಡೆಸಲು ಸರ್ಕಾರದಿಂದ ಅನುಮತಿ ಪಡೆದ ಎಲ್ಲಾ ಉದ್ದಿಮೆಗಳಿಗೂ ಅನ್ವಯವಾಗಲಿದೆ.

**ಮೂರು ವಲಯ:** ಕನಿಷ್ಠ ವೇತನವನ್ನು ನಿಗದಿಪಡಿಸುವಾಗ ಜನಸಂಖ್ಯೆಗೆ ಅನುಗುಣವಾಗಿ ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಆಯಾ ವಲಯಗಳ ಜೀವನ ನಿರ್ವಹಣಾ ವೆಚ್ಚ ಪರಿಗಣಿಸಿ, ಪ್ರತ್ಯೇಕವಾಗಿ ಕನಿಷ್ಠ ವೇತನ ನಿಗದಿ ಮಾಡಲಾಗಿದೆ. ಬೆಂಗಳೂರು ಮತ್ತು ಮಹಾನಗರ ಪಾಲಿಕೆಗಳು ವಲಯ-1ರಲ್ಲಿದ್ದು, ಇಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಮತ್ತು ಸಿಬ್ಬಂದಿ ಹೆಚ್ಚಿನ ವೇತನ ಪಡೆಯಲಿದ್ದಾರೆ. ನಗರಸಭೆ ವ್ಯಾಪ್ತಿ ಪ್ರದೇಶ ಹೊಂದಿರುವ ಜಿಲ್ಲಾ ಕೇಂದ್ರಗಳು ವಲಯ -2ರಲ್ಲಿವೆ.

ಪಾಲಿಕೆ, ಜಿಲ್ಲಾಕೇಂದ್ರಗಳಲ್ಲದೆ ರಾಜ್ಯದ ಎಲ್ಲಾ ತಾಲ್ಲೂಕು, ಹೋಬಳಿ ಕೇಂದ್ರಗಳು ವಲಯ-3ರಲ್ಲಿವೆ.

| ಯಾವ ಹುದ್ದೆಗೆ ಎಷ್ಟು ಕನಿಷ್ಠ ವೇತನ | |
|---|---|
| ಹುದ್ದೆ | ವೇತನ(₹ಗಳಲ್ಲಿ) |
| ಕಿರಿಯ ವೈದ್ಯರು, ಆಯುರ್ವೇದ, ಹೋಮಿಯೋಪತಿ ವೈದ್ಯರು (ವೈದ್ಯಕೀಯ ಪದವಿ) | 40,000 |
| ವೈದ್ಯರು, ಆಯುರ್ವೇದ, ಹೋಮಿಯೋಪತಿ (ಡಿಪ್ಲೊಮಾ), ಮೈಕ್ರೋ ಬಯಾಲಜಿಸ್ಟ್ | 10,140-11,180 |
| ಸಂಶೋಧನಾ ಸಹಾಯಕರು, ಚಿಕಿತ್ಸಾ ಮೇಲ್ವಿಚಾರಕರು, ಸ್ಟಾಫ್‌ನರ್ಸ್, ನರ್ಸ್ (ಬಿಎಸ್‌ಸಿ) | 10,034-11,050 |
| ಪದವಿ ಪಡೆಯದ ನರ್ಸ್, ಗುಮಾಸ್ತರು, ಕಂಪ್ಯೂಟರ್ ಆಪರೇಟರ್ | 9,698-10,686 |
| ವಾಚ್‌ಮನ್, ಭದ್ರತಾ ಸಿಬ್ಬಂದಿ, ವಾರ್ಡ್ ಬಾಯ್ | 9,334-10,348 |
| ಲಿಫ್ಟ್ ಆಪರೇಟರ್, ಆಂಬುಲೆನ್ಸ್ ಚಾಲಕರು | 9,100-10,270 |
| ಶೌಚಾಲಯ ಶುಚಿಗೊಳಿಸುವವರು | 12,870-14,040 |

**ನಿಬಂಧನೆಗಳು:**

- ದಿನಗೂಲಿ ನೀಡುವಾಗ ಆಯಾ ವಲಯಗಳಿಗೆ ನಿಗದಿಪಡಿಸಿದ ಕನಿಷ್ಠ ತಿಂಗಳ ವೇತನದ ಮೊತ್ತವನ್ನು 26 ದಿನಗಳಿಂದ ಭಾಗಿಸಬೇಕು. ಉಳಿದ ನಾಲ್ಕು ದಿನ ಕೆಲಸ ಮಾಡಿದ್ದರೆ, ಈ ಲೆಕ್ಕಾಚಾರದಂತೆಯೆ ದಿನಭತ್ಯೆ ನೀಡಬೇಕು.
- ಸಿಬ್ಬಂದಿಯ ಒಂದು ದಿನದ ಕೆಲಸದ ಅವಧಿ 8 ಗಂಟೆ ಮೀರತಕ್ಕದ್ದಲ್ಲ. ಅದಕ್ಕಿಂತ ಹೆಚ್ಚಿನ ಸಮಯ ಕೆಲಸ ಮಾಡಿದಲ್ಲಿ ದಿನದ ವೇತನವನ್ನು 8 ಗಂಟೆಯಿಂದ ಭಾಗಿಸಿ, ಬರುವ ಮೊತ್ತವನ್ನು ಗಂಟೆ ಲೆಕ್ಕಕ್ಕೆ ಪರಿಗಣಿಸಬೇಕು. ಹೆಚ್ಚುವರಿ ಅವಧಿಗೆ ದುಪ್ಪಟ್ಟು ವೇತನ ಕೊಡಬೇಕು.
- ಸಂಸ್ಥೆಯಲ್ಲಿ ನಿಗದಿಪಡಿಸಿದ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವವರಿಗೆ ದಿನದ ವೇತನದ ಎರಡು ಪಟ್ಟು ನೀಡಬೇಕು.
- ವೇತನವನ್ನು ಚೆಕ್ ಅಥವಾ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಬೇಕು.

ವಿಜಯ ಕರ್ನಾಟಕ



# ಖಾಸಗಿ ಕಾಲೇಜುಗಳಲ್ಲಿನ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆಗೆ ಇನ್ನು ಒಂದೇ ಕೌನ್ಸೆಲಿಂಗ್ ಸಾಧ್ಯತೆ

ಸಾಂದರ್ಭಿಕ ಚಿತ್ರ



■ **ವಿಕ ಸುದ್ದಿಲೋಕ** ಬೆಂಗಳೂರು

ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಖಾಸಗಿ ಕೋಟಾದಡಿ ಸೀಟು ಗಿಟ್ಟಿಸಲು ವಿದ್ಯಾರ್ಥಿಗಳು ಇನ್ನು ಮುಂದೆ ಹಲವು ಬಾರಿ ಕೌನ್ಸೆಲಿಂಗ್‌ಗೆ ಅಲೆಯುವ ಅಗತ್ಯವಿಲ್ಲ. ಏಕೆಂದರೆ, ಡೀಮ್ಡ್ ವಿಶ್ವವಿದ್ಯಾಲಯಗಳೂ ಸೇರಿದಂತೆ ಎಲ್ಲ ಖಾಸಗಿ ಕಾಲೇಜುಗಳು ಒಂದೇ ವೇದಿಕೆಯಡಿ ಕೌನ್ಸೆಲಿಂಗ್ ನಡೆಸಲು ಮುಂದಾಗಿವೆ.

ಹೀಗಾಗಿ, ಇನ್ನು ಮುಂದೆ ಎರಡೇ ಕೌನ್ಸೆಲಿಂಗ್‌ಗಳು ನಡೆಯಲಿವೆ. ಸರಕಾರಿ, ಅನುದಾನಿತ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸರಕಾರಿ ಕೋಟಾದ ಸೀಟುಗಳನ್ನು ತುಂಬಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಒಂದು ಕೌನ್ಸೆಲಿಂಗ್ ನಡೆಸಿದರೆ, ಖಾಸಗಿ ಕಾಲೇಜುಗಳ ವೇದಿಕೆಯು ತನ್ನ ವ್ಯಾಪ್ತಿಯ ಖಾಸಗಿ ಸೀಟುಗಳ ಹಂಚಿಕೆಗಾಗಿ ಮತ್ತೊಂದು ಕೌನ್ಸೆಲಿಂಗ್ ನಡೆಸಲಿದೆ.

ಇದುವರೆಗೆ, ಖಾಸಗಿ ಕಾಲೇಜುಗಳಲ್ಲಿನ ಸೀಟು ಪಡೆಯಲು ವಿದ್ಯಾರ್ಥಿಗಳು 'ಕಾಮೆಡ್-ಕೆ' ಜತೆಗೆ, ಡೀಮ್ಡ್ ವಿಶ್ವವಿದ್ಯಾಲಯ ಹಾಗೂ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳು ಪ್ರತ್ಯೇಕವಾಗಿ ನಡೆಸುವ ಕೌನ್ಸೆಲಿಂಗ್‌ಗಳಿಗೆ ಹಾಜರಾಗಬೇಕಿತ್ತು. ಇದೀಗ ಖಾಸಗಿ ಕಾಲೇಜುಗಳೆಲ್ಲ ಸೇರಿ ಒಂದೇ ಕೌನ್ಸೆಲಿಂಗ್ ನಡೆಸಲು ಮುಂದಾಗಿರುವುದರಿಂದ ವಿದ್ಯಾರ್ಥಿಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಇತ್ತೀಚಿನ ಈ ಬೆಳವಣಿಗೆಯನ್ನು ಖಚಿತಪಡಿಸಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, "ಖಾಸಗಿ ವೃತ್ತಿಪರ ಕಾಲೇಜುಗಳು ಈ ಕುರಿತು ಶೀಘ್ರ ತೀರ್ಮಾನಕ್ಕೆ ಬಂದಲ್ಲಿ ಅನುಷ್ಠಾನಗೊಳಿಸಲು ಸಹಕಾರಿಯಾಗಲಿದೆ," ಎಂದು ಹೇಳಿದ್ದಾರೆ.

**ಫೆ. 22ರಂದು ಸಚಿವರ ಭೇಟಿ**

ಈ ನಡುವೆ, "ಎಲ್ಲ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು 'ಕಾಮೆಡ್-ಕೆ' ವೇದಿಕೆಯಡಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲು ಒಪ್ಪಿಗೆ ಸೂಚಿಸಿದ್ದು, ಫೆಬ್ರವರಿ 22ರಂದು ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಅನುಮತಿ ನೀಡುವಂತೆ ಕೋರಲಾಗುವುದು," ಎಂದು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ಕಾರ್ಯದರ್ಶಿ ಪಾಂಡುರಂಗಶೆಟ್ಟಿ ತಿಳಿಸಿದ್ದಾರೆ.

## ಶೇ 20ರಷ್ಟು ಶುಲ್ಕ ಹೆಚ್ಚಳಕ್ಕೆ ಒತ್ತಡ

ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಶುಲ್ಕವನ್ನು ಶೇ 20ರಷ್ಟು ಹೆಚ್ಚಿಸಲು ಖಾಸಗಿ ಕಾಲೇಜುಗಳು ಸರಕಾರದ ಮುಂದೆ ಬೇಡಿಕೆಯಿಟ್ಟಿವೆ. ಫೆ. 22ರಂದು ಸಚಿವರ ಭೇಟಿ ಸಂದರ್ಭದಲ್ಲಿ ಶುಲ್ಕ ಹೆಚ್ಚಳದ ಬಗ್ಗೆಯೂ ಚರ್ಚೆ ನಡೆಯಲಿದೆ. ಅಂತಿಮವಾಗಿ ಸರಕಾರ ಹಾಗೂ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಸರ್ವಸಮ್ಮತ ತೀರ್ಮಾನದಂತೆ ಶುಲ್ಕ ಹೆಚ್ಚಳಕ್ಕೆ ಅನುಮತಿ ದೊರೆಯಲಿದೆ.

ಒಂದು ವೇಳೆ ಶುಲ್ಕ ಹೆಚ್ಚಳವಾದಲ್ಲಿ, ಸಿಇಟಿ ಮೂಲಕ ಲಭ್ಯವಾಗಲಿರುವ ಎಂಬಿಬಿಎಸ್ ಸೀಟು ಶುಲ್ಕ 77,500 ರಿಂದ 93 ಸಾವಿರ ರೂ.ಗಳಿಗೆ ಏರಿಕೆಯಾಗಲಿದೆ. ಅದೇ ರೀತಿ, ಎಂಜಿನಿಯರಿಂಗ್ ಪ್ರವೇಶ ಶುಲ್ಕ 55 ಸಾವಿರದಿಂದ 66 ಸಾವಿರ ರೂ.ಗೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಹಾಗೆಯೇ, ದಂತ ವೈದ್ಯ ಕೋರ್ಸ್‌ನ ಶುಲ್ಕ 63 ಸಾವಿರ ರೂ.ಗೆ ಏರಿಕೆಯಾಗುವ ಸಾಧ್ಯತೆಯಿದೆ.